# ಕಾಶ್ಮೀರ: ಭೂಮಿ ಸರೋವರ

ಜನಃ ಇದಮೇವ ತು ತತ್ತ್ವಮಿತಿ ತಾತ್ಪರ್ಯಮ್

ಈ ಮಾತುಗಳ ತಾತ್ಪರ್ಯವನ್ನು ಹೀಗೆ ಸಂಗ್ರಹಿಸಬಹುದು: 'ವಿಶ್ವಚೈತನ್ಯದ ವಿಚಾರವಾಗಿ ಶೈವ, ವೈಷ್ಣವ ಮೊದಲಾಗಿ ಎಲ್ಲ ಆಗಮಗಳೂ ವೇದಾಂತವೂ ಏಕಾಭಿಪ್ರಾಯವನ್ನೇ ಹೊಂದಿವೆ. ಆ ಅಭಿಪ್ರಾಯವನ್ನೇ ನಾವು ಹಿಡಿದಿರುವುದು. ಅದನ್ನೇ ಬೌದ್ಧರು ಚಿನ್ಮಾತ್ರವೆಂದಾಗಲಿ, ತ್ರಿಧಾತುವೆಂದಾಗಲಿ ಹೇಳುವಾಗ ಹಿಡಿದಿರುವುದು. ಈ ಶಾಸ್ತ್ರಗಳಿಗೆ ವ್ಯಾಖ್ಯಾನಮಾಡುವವರು ಮಾತ್ರ ತಂತಮ್ಮ ದುರಭಿಮಾನಗಳಿಂದ ಜನರನ್ನು ತಪ್ಪುದಾರಿಗಳಿಗೆಳೆಯುತ್ತಿದ್ದಾರೆ, ಅಷ್ಟೆ.'

(ಅನುವಾದ: ಸಾ. ಕೃ. ರಾಮಚಂದ್ರರಾವ್)

'ವ್ಯಾಖ್ಯಾನಕಾರರ ದುರಭಿಮಾನದಿಂದ ಜನರನ್ನು ತಪ್ಪುದಾರಿಗೆ ಎಳೆಯುವುದು' ಎಂದಿನಿಂದಲೂ ನಡೆದುಬರುತ್ತಿರುವ ಸಂಗತಿ ಎನ್ನುವುದು ಗಮನಾರ್ಹ. ಈ ದುರಭಿಮಾನದ ಸುಳಿಗಳಿಂದ ತಪ್ಪಿಸಿಕೊಳ್ಳುವುದು ಹೇಗೆ? ಪೂರ್ವಗ್ರಹಗಳಿಂದ ಕಳಚಿಕೊಳ್ಳಬೇಕಷ್ಟೆ. ಅದು ಸಿದ್ಧಿಸಬೇಕಾದರೆ ಔಚಿತ್ಯಪ್ರಜ್ಞೆಯನ್ನು ದಕ್ಕಿಸಿಕೊಳ್ಳಬೇಕು. ಹತ್ತಾರು ವಿವರಗಳೂ ವಸ್ತುಗಳೂ ನಮ್ಮ ಮುಂದೆ ಇದ್ದಾಗ, ಯಾವುದರ ಅಸ್ತಿತ್ವವನ್ನೂ ನಿರಾಕರಿಸದೆಯೇ ಅವೆಲ್ಲಕ್ಕೂ ಸಲ್ಲಿಸುವ ಉಚಿತ ಸ್ಥಾನಮಾನವೇ 'ಔಚಿತ್ಯ' ಎನಿಸಿಕೊಳ್ಳುತ್ತದೆ. ಕಾವ್ಯಾಸ್ವಾದದ ಸಮಯದಲ್ಲಿ ಒದಗುವ ಔಚಿತ್ಯ–ಅನೌಚಿತ್ಯಗಳ ಮೀಮಾಂಸೆಯನ್ನು ನಡೆಸಿದವನು ಕ್ಷೇಮೇಂದ್ರ; 'ಔಚಿತ್ಯವಿಚಾರಚರ್ಚಾ' ಕೃತಿಯ ಈ ಕರ್ತೃ ಕೂಡ ಕಾಶ್ಮೀರದವನು.

ಉಚಿತಸ್ಥಾನ ವಿನ್ಯಾಸಾದಲಂಕೃತಿರಲಂಕೃತಿಃ |
ಔಚಿತ್ಯಾದಚ್ಯುತಾ ನಿತ್ಯಂ ಭವಂತ್ಯೇವ ಗುಣಾ ಗುಣಾಃ||

(ಎಂದಿಗೂ ಉಚಿತವಾದ ಸ್ಥಾನದಲ್ಲಿರಿಸಿದಾಗಲೇ 'ಅಲಂಕಾರ'ವೂ ಅಲಂಕಾರವಾಗುತ್ತದೆ. ಔಚಿತ್ಯವನ್ನು ಅಗಲದಿದ್ದಾಗ ಮಾತ್ರ 'ಗುಣ'ಗಳು ಗುಣಗಳಾಗುತ್ತವೆ.)

ಕ್ಷೇಮೇಂದ್ರನ ಈ ಮಾತುಗಳನ್ನು ಎಷ್ಟು ಮನನಮಾಡಿದರೂ ಸಾಲದೆನ್ನಿ! ಜೀವನದ ಎಲ್ಲ ಸಂದರ್ಭಗಳಿಗೂ ಇವು ಅನ್ವಯವಾಗುವಂಥವು.

ಉಚಿತಾನುಚಿತಗಳನ್ನು ತಿಳಿದುಕೊಳ್ಳುವ ವಿವೇಕವನ್ನು ನಾವು ಕಳೆದುಕೊಂಡಾಗ ಬೇರೆಯವರು ಅದರ ಲಾಭವನ್ನು ಪಡೆಯುತ್ತಾರೆ; ನಮ್ಮ ಮೇಲೆ ಆಳ್ವಿಕೆ ನಡೆಸುತ್ತಾರೆ. 'ಅವರು ಗುರುಗಳು, ನಾವು ಶಿಷ್ಯರು' ಎಂಬ ಸಂಕೋಚಕ್ಕೆ ತುತ್ತಾಗುತ್ತೇವೆ. ಇದೇ ಅಧ್ಯಾತ್ಮದ ಸಂದರ್ಭದಲ್ಲಿ ಅವಿದ್ಯೆಯೆಂದೂ, ಸಾಮಾಜಿಕ ಸಂದರ್ಭದಲ್ಲಿ ದಾಸ್ಯವೆಂದೂ ಎನಿಸಿಕೊಳ್ಳುತ್ತದೆ. 'ರಾಜತರಂಗಿಣಿ'ಯು ಸಾಮಾಜಿಕ ಸಂದರ್ಭದಲ್ಲಿ ಎದುರಾಗುವ ಅವಿದ್ಯೆಯ ಬಗ್ಗೆ ಒಂದೆಡೆ ಹೀಗೆಂದಿದೆ: 'ನಟನಂತೆ ಶೋಕ, ದೈನ್ಯ, ಭಯ ಮೊದಲಾದ ವಿಕಾರಗಳನ್ನು ಪ್ರದರ್ಶಿಸುವ ರಾಜನನ್ನು ಕಂಡೂ ಜಡವಾಗಿರುವ ಸೇವಕರ ಕಾರಣದಿಂದಾಗಿಯೇ ತೀರ್ಥಕ್ಷೇತ್ರಮಯವಾದರೂ ಈ ಭೂಮಿ ಅಪಾವನವಾಗಿದೆ.' ಜಡತೆ ಎಂದರೆ ನಮ್ಮತನದ ಅರಿವು ಇಲ್ಲದಿರುವುದೇ ಹೌದಲ್ಲವೆ? ಸೀಮಿತವಾದ ನಮ್ಮ ತಿಳಿವಳಿಕೆ, ಪೂರ್ವಗ್ರಹಪೀಡಿತ ಬುದ್ಧಿ, ತಪ್ಪಾಗಿ ತೋರಿಕೊಳ್ಳುವ ಅರಿವು – ಇವೇ ನಮ್ಮ ಬಂಧನಕ್ಕೆ ಕಾರಣವಾದ ವಿವರಗಳು ಎನ್ನುತ್ತದೆ, ಕಾಶ್ಮೀರದ 'ಶಿವಸೂತ್ರ' ಎಂಬ ದರ್ಶನಗ್ರಂಥ (ಜ್ಞಾನಂ ಬಂಧಃ). ಕಾಶ್ಮೀರ ಶೈವದರ್ಶನವು ಅವಿದ್ಯೆಯನ್ನು 'ಮಲ' ಎನ್ನುತ್ತದೆ.

'ನಾವೇ ಗುರುಗಳು' ಎಂದು ಘೋಷಿಸಿಕೊಂಡು ಜನರನ್ನು ದಾರಿ ತಪ್ಪಿಸುತ್ತಿದ್ದವರು ಅಭಿನವಗುಪ್ತನ ಕಾಲದಲ್ಲೂ ಇದ್ದರು. ಆದರೆ ಅಂಥವರನ್ನು ಗುರುತಿಸಿ, ಎಚ್ಚರಿಸಿದವನು ಅವನು. 'ನಾನೇ ಶಿವ – ಎಂದು ಪಟ್ಟವೇರಿದ ಸ್ವಯಂಘೋಷಿತ ಗುರುಗಳನ್ನು ಹಿಂಬಾಲಿಸಿ ಗೊಂದಲದಲ್ಲಿ ಬಿದ್ದೆ; ತತ್–ತ್ವ ಎಂಬ ಪದಗಳನ್ನೂ ಇವರ ನಾಲಗೆ ಮುಟ್ಟಿರಲಿಲ್ಲ' ಎಂದು ಅವನು ಹೇಳುತ್ತಾನೆ. ಆದರೆ ದಿಟವಾದ ಗುರುಗಳ ಬಗ್ಗೆ ಅವನು ಗೌರವವನ್ನೂ ಹೊಂದಿದ್ದ. ಅವನು ಹತ್ತಾರು ಗುರುಗಳ ಬಳಿ ನಾಲ್ಕಾರು ಶಾಸ್ತ್ರಗಳನ್ನು ಕಲಿತವನು. ಅವನು ತನ್ನನ್ನು ತಾನು ದುಂಬಿಗೆ ಹೋಲಿಸಿಕೊಂಡಿದ್ದಾನೆ. 'ಹೇಗೆ ದುಂಬಿಯು ರಸವತ್ತಾದ ಮಕರಂದವನ್ನು ಬಯಸಿ, ಹೂವಿನಿಂದ ಹೂವಿಗೆ ಅಲೆದಾಡುವುದೋ, ಹಾಗೇ ನಾನು ಒಬ್ಬ ಗುರುವಿನಿಂದ ಇನ್ನೊಬ್ಬ ಗುರುವಿನ ಬಳಿ ಸಾರಿ ಹಲವು ಶಾಸ್ತ್ರಗಳನ್ನು ಕಲಿತೆ' ಎಂದಿದ್ದಾನೆ. ಗುರು, ಶಾಸ್ತ್ರ ಮತ್ತು ಸ್ವಂತ (ಗುರುತಃ ಶಾಸ್ತ್ರತಃ ಸ್ವತಃ) – ಈ ಮೂರು ನೆಲೆಯಲ್ಲಿ ನಮ್ಮ ಅಧ್ಯಯನ ಸಾಗಬೇಕು ಎಂದ ಅವನು, ನಮ್ಮ ಕಲಿಕಾಪದ್ಧತಿಗೆ ದಿಕ್ಸೂಚಿಯಾಗಬೇಕಾದವನು.

ಆಚಾರ್ಯ ಶಂಕರ ನಮ್ಮ ದೇಶದ ಮಹಾದಾರ್ಶನಿಕ; ವೇದಾಂತಕ್ಕೇ ಹೊಸದಾದ ಜೀವಕಳೆಯನ್ನು ತುಂಬಿದವರು. ಅವರು ಶಿವನ ಅವತಾರ ಎಂಬುದರ ಜೊತೆಗೆ, ಕಾಶ್ಮೀರದಲ್ಲಿ ಸರ್ವಜ್ಞಪೀಠಾರೋಹಣವನ್ನು ಮಾಡಿದರು ಎಂಬ

## ಜೋಡಿ ಸುಂದರಿಯರು

ಇದು ಲಡಾಕ್‌ಗೆ ಹೋಗುವ ದಾರಿಯಲ್ಲಿ ಸಿಗುವ ಡಿಸ್ಕಿಟ್ ಮಾನೆಸ್ಟ್ರಿಯ ಬುದ್ಧನ ಚಿತ್ರ. ಸಮುದ್ರಮಟ್ಟದಿಂದ 11 ಸಾವಿರ ಅಡಿ ಎತ್ತರದಲ್ಲಿರುವ ಲೇಹ್–ಲಡಾಕ್‌ಗಳು ಪ್ರವಾಸಿ ತಾಣಗಳಾಗಿಯೂ ಸರಹದ್ದಿನ ಗುರುತುಗಳಾಗಿಯೂ ಹೆಸರುಗಳಿಸಿವೆ. ಎತ್ತರೆತ್ತರ ಪರ್ವತಗಳು, ಆಳ ಕಣಿವೆಗಳು, ಕನ್ನಡಿಯಂಥ ಸರೋವರಗಳು... ನೋಡಿದಷ್ಟೂ ಮಿಗುವ ಪ್ರಕೃತಿ ಸೌಂದರ್ಯದ ಖನಿಗಳಾಗಿರುವ ಈ ಜೋಡಿ ಸುಂದರಿಯರು ಭಾರತ ಶಿಖರಕಿರೀಟದಲ್ಲಿ ಮಿನುಗುವ ಜೋಡಿ ಮುತ್ತುಗಳು. ವರ್ಷದ ಏಳು ತಿಂಗಳು ಹಿಮದ ಹೊದಿಕೆಯನ್ನು ಹೊದ್ದಿರುತ್ತದೆ. ಹಿಮ ಕರಗಿ ನೆಲವನ್ನು ಬಿಟ್ಟುಕೊಟ್ಟಾಗ ಇಲ್ಲಿನ ರೈತರು ಆಲೂಗಡ್ಡೆ, ಬಾರ್ಲಿ, ಗೋದಿ, ಬಟಾಣಿಗಳನ್ನು ಬೆಳೆಯುತ್ತಾರೆ. ಜೊತೆಗೆ ದುಡಿಯುವುದಕ್ಕೂ, ಹಸಿವಾದಾಗ ತಿನ್ನುವುದಕ್ಕೂ ಯಾಕ್‌ಗಳನ್ನು ಸಾಕುತ್ತಾರೆ.



